# ಜಾಗತೀಕರಣದ ಹಿನ್ನೆಲೆಯಲ್ಲಿ ಕನ್ನಡ ಭಾಷೆಯು ಎದುರಿಸುತ್ತಿರುವ ಸವಾಲು ಸಾಧ್ಯತೆಗಳು

**ಡಾ.ಕೆ ಎಸ್ ಶಿವಪ್ರಕಾಶ**
**ಕನ್ನಡ ಉಪನ್ಯಾಸಕರು**

ಸುದೀರ್ಘವಾದ ಚರಿತ್ರೆಯನ್ನೊಳಗೊಂಡ ಕನ್ನಡ ಭಾಷೆಯು ಅನೇಕ ಸವಾಲುಗಳನ್ನು ಎದುರಿಸಿದೆ. ಈ ಸವಾಲುಗಳು ಮತ್ತು ಅದರ ಪರಿಣಾಮಗಳನ್ನು ಕನ್ನಡದ ಸಾಹಿತ್ಯ ಕೃತಿಗಳು ಮತ್ತು ಅದಕ್ಕೆ ಸಂಬಂಧಿಸಿದ ಪುಸ್ತಕಗಳು ದಾಖಲಿಸಿವೆ. ಆದರೆ ಇನ್ನೆಷ್ಟೋ ಸಲ ಇಂತಹ ಸವಾಲುಗಳು ಯಾರ ಗಮನಕ್ಕೂ ಬಂದಿಲ್ಲ, ದಾಖಲೆಯಾಗಿಲ್ಲ. ಆದರೆ ನಮ್ಮ ಕವಿಗಳು ಮತ್ತು ವಿದ್ವಾಂಸರು ಮಾಡಿಕೊಂಡ ಆಯ್ಕೆಗಳನ್ನು ಗಮನಿಸಿದಾಗ ಈ ಸಂಗತಿಗಳು ನೆನಪಿಗೆ ಬರುತ್ತವೆ.

ಒಂದು ಭಾಷೆಯನ್ನು ಬಳಸುತ್ತಿರುವ ಜನರ ಸಮುದಾಯವು ಆ ಭಾಷೆಯ ಸ್ವರೂಪದ ಬಗ್ಗೆ ಆಲೋಚಿಸುವುದು ಸಹಜ ಮತ್ತು ಅನಿವಾರ್ಯವು ಆಗಿದೆ. ಒಂದು ಭಾಷೆಯು ಯಾವಾಗಲೂ ತನ್ನೊಳಗಿನ ಮತ್ತು ಹೊರಗಿನ ಪ್ರಭಾವಗಳನ್ನು ದಿನನಿತ್ಯ ಎದುರಿಸುತ್ತಿರುತ್ತದೆ. ಅದು ಸದಾ ಬದಲಾಗುತ್ತಿರುವ, ಬಹಳ ಸಂಕೀರ್ಣವಾದ ಸಂಗತಿಯಾಗಿದೆ. ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳು, ಭಾಷೆಯ ಬಳಕೆಯಲ್ಲಿ ಹಲವು ತಲ್ಲಣಗಳನ್ನು ಹುಟ್ಟಿಸುತ್ತವೆ. ಈ ತಲ್ಲಣಗಳು ಬದಲಾವಣೆಗಳ ದಿಕ್ಕನ್ನು ನಿರ್ಧರಿಸಬಲ್ಲವು. ಹಲವು ಹಿನ್ನೆಗಳಿಂದ ಬಂದ ಬಲ್ಲಿದರ ಸಮುದಾಯವು ಇಂತಹ ಸಮಸ್ಯೆಗಳನ್ನು ಕುರಿತು ಅಮೂಲಾಗ್ರವಾಗಿ ಚರ್ಚಿಸಿದಾಗ ಮಾತ್ರ ಬೆಳಕಿಗೆ ಬರುತ್ತವೆ. ಇಲ್ಲದಿದ್ದರೆ ಯಥಾವತ್ತಾಗಿ ಮುಂದುವರಿಯುತ್ತದೆ.

ಕನ್ನಡ ಮೊದಲ ಕೃತಿಯಾದ 'ಕವಿರಾಜ ಮಾರ್ಗ' ರಚಿಸಲ್ಪಟ್ಟಿದ್ದು ಹತ್ತನೇ ಶತಮಾನದಲ್ಲಿ ಇದೊಂದು ಲಾಕ್ಷಣಿಕ ಗ್ರಂಥ, ಅಲಂಕಾರಗ್ರಂಥ. ಚಾರಿತ್ರಿಕ ಗ್ರಂಥ ಎಂಬ ಹೆಸರುಗಳಿಂದ ಹೆಸರಿಸಲ್ಪಟ್ಟಿದೆ. ಕನ್ನಡ ಭಾಷೆಯ ಇತಿಹಾಸದ ಬಹಳ ಮುಖ್ಯವಾದ ಸಂಧಿಕಾಲದಲ್ಲಿ ಕನ್ನಡ ಭಾಷೆ ಎದುರಿಸಬೇಕಾದ ಅನೇಕ ಮುಖ್ಯವಾದ ಸವಾಲುಗಳನ್ನು ಕವಿರಾಜ ಮಾರ್ಗವು ಎದುರಿಸುತ್ತದೆ. ಅಷ್ಟೇ ಅಲ್ಲ ಬಹಳ ದಿಟ್ಟವಾದ ಬಹಳ ಕಾಲದವರೆಗೆ ಉಳಿದುಬಂದು ಪರಿಹಾರಗಳನ್ನು ಸೂಚಿಸುತ್ತದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳುವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ವಿದ್ವತ್ ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸ ಬೆಳೆಯನ್ನು ತೆಗೆಯುತ್ತಾ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶವಾಗಿದೆ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನ ಮೂಲಕ ಜಗತ್ತಿನ ಜ್ಞಾನ ಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ ಭಾಷಾ ನೀತಿ, ಭಾಷಾ ಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ ಇಂತಹ ಸಂಗತಿಗಳಿಗೆಲ್ಲ ಎದುರಾಗದೆ ಸುಮ್ಮನಿರಲು ಸಾಧ್ಯವಿಲ್ಲ ಎಂಬ ಒತ್ತಡವಿದೆ. ಸಾಹಿತ್ಯ ಪ್ರಕಾರಗಳ ಒಳಗೆ ಇವನ್ನೆಲ್ಲ ತಕ್ಕರೂಪದಲ್ಲಿ ನಿರೂಪಿಸಲು ಆಗದು ಎಂಬ ಪರಿಸ್ಥಿತಿ ಇದೆ. ಇದರಿಂದಾಗಿಯೆ, ಸಾಹಿತ್ಯದ ಸಾಂಪ್ರದಾಯಿಕ ರೂಪ, ಪ್ರಕಾರಗಳು ಈ ಬಗೆಯ ಸಂವೇದನೆಗಳನ್ನು ಸಮರ್ಥವಾಗಿ ಬಿಂಬಿಸಲಾರವು ಎಂಬ ಅಭಿಪ್ರಾಯ ಮೂಡುತ್ತಿರುವುದು ಸಾಹಿತ್ಯ ಪ್ರಕಾರಗಳಿಗಿರುವ ಮಿತಿಯಿಂದಾಗಿಯು ಈ ಸಮಸ್ಯೆ ಕಾಣಿಸುತ್ತಿರಬಹುದು. ಪ್ರಕಾರಗಳ ಸಾಹಿತ್ಯಿಕ ಮಾನದಂಡಗಳು ತುಂಬ ಹಳೆಯ ಕಾಲದವು. ವರ್ತಮಾನದ ಸಮಾಜಗಳ ಅನುಭವ ಸಂಕೀರ್ಣತೆಯನ್ನು ಬಿಂಬಿಸಲು ಆ

ಹಳೆಯ ಮಾನದಂಡಗಳು ಅಡ್ಡಬರುತ್ತವೆ. ಸಾಹಿತ್ಯ ಪ್ರಕಾರಗಳಿಗಿಂತಲೂ ಸಾಮಾಜಿಕ ಅನುಭವವೇ ಮುಖ್ಯ, ಹೀಗಾಗಿಯೇ ಕನ್ನಡ ಸಾಹಿತ್ಯದ ಸಮಕಾಲೀನ ನಿರೂಪಣೆಗಳಲ್ಲಿ ಪ್ರಕಾರಗಳ ಚೌಕಟ್ಟಿಗೆ ಮಹತ್ವವಿಲ್ಲವಾಗುತ್ತಿರುವುದು ಕಂಡುಬರುತ್ತದೆ.

ಸಾಹಿತ್ಯ ಸಂವೇದನೆಯಲ್ಲಿ ಪ್ರತ್ಯೇಕತಾ ಭಾವನೆ ಬೆಳೆಯುತ್ತದೆ. ಇದು ದಲಿತ–ಬಂಡಾಯ ಕಾಲದಲ್ಲೆ ಉಂಟಾದ ಸ್ವಭಾವ ನಾವು ಬರೆದದ್ದು ನಮ್ಮದು. ಅವರು ಬರೆದದ್ದು ಅವರದು ಎಂಬ ಧೋರಣೆ ಈಗಲೂ ಬಲವಾಗಿದೆ. ಜಾತಿ ಶ್ರೇಣಿಗೆ ತಕ್ಕಂತೆಯೂ ಸಾಹಿತ್ಯ ಪರಿಸರ ಗುಪ್ತವಾಗಿದೆ. ದಲಿತರು ಬರೆದದ್ದೇ ಬೇರೆ, ಶೂದ್ರರು ಬರೆದದ್ದೇ ಬೇರೆ, ಮಹಿಳೆಯರದೇ ಮತ್ತೊಂದು ವೈದಿಕರದು ಇನ್ನೊಂದು, ಅಲ್ಪಸಂಖ್ಯಾತ ಮುಸ್ಲಿಂರದೇ ಬೇರೊಂದು ಎಂಬ ಪ್ರತ್ಯೇಕತಾ ಭಾವನೆ ಸಾಹಿತ್ಯದಲ್ಲಿದೆ. ಓದುವುದರಲ್ಲೂ ಇಂತದ್ದೇ ಪ್ರತ್ಯೇಕ ಮನೋಧರ್ಮವಿದೆ. ಬಹುರೂಪಿ ಅನನ್ಯ ಎಂದು ಗುರುತಿಸಿಕೊಳ್ಳುವುದು ಬೇರೆ ಆದರೆ ಹೀಗೆ ಬಿಡಿಯಾದ ಅನನ್ಯತೆಯ ನಿರೂಪಣೆಗಳು ಅಖಂಡ ಮಾನವತೆಯನ್ನು ನುಡಿಸಲಾರವು ಒಂದು ನಾಡಿನ ಪ್ರತ್ಯೇಕತಾ ಭಾವನೆಗಳನ್ನು ಗಮನಿಸಬಹುದು. ದಲಿತ ಬಂಡಾಯ ಸಾಹಿತ್ಯವನ್ನು ಹೀಗೆಯೇ ಕಾಣಲಾಯಿತು ಮತ್ತು ಅದರಂತೆಯೇ ಸೃಷ್ಟಿಸಲಾಯಿತು. ಇದರ ಪರಿಣಾಮ ಗ್ರಾಮ ಮತ್ತು ನಗರ ಸಂವೇದನೆಗಳ ದಾಖಲೆಯಲ್ಲೂ ಕಂಡಿತು ಜಾತಿಗಳ ಅನುಭವಗಳ ಆಳದಲ್ಲಿ ಇಂತಹ ಪ್ರತ್ಯೇಕತಾ ನಿರೂಪಣೆಗಳಿಗೂ ಕಾರಣವಾಗಿರುತ್ತವೆ. ಇಂತಹ ವಿಭಿನ್ನ ನಿರೂಪಣೆಗಳನ್ನು ವೈವಿದ್ಯ ಎಂದು ಒಪ್ಪಬಹುದಾದರೂ ಗುಪ್ತವಾಗಿ ಅನ್ಯಸ್ವಭಾವ ಇರುವುದನ್ನು ನಿರಾಕರಿಸಲಾಗದು ಇಂತಲ್ಲಿನ ಪ್ರತ್ಯೇಕತಾ ಭಾವನೆಯು ವಿಶಿಷ್ಟವಾಗಿರಬಹುದಾದರೂ ಸಾಹಿತ್ಯದ ಅಧ್ಯಯನ, ಓದಿನ ಅನುಸಂಧಾನಗಳಲ್ಲಿ ಬೇರೊಂದೇ ಆಗಿ ಧ್ವನಿತವಾಗಿರುತ್ತದೆ. ಸಾಹಿತ್ಯ ವಿಮರ್ಶೆಯ ಮಾನದಂಡಗಳಲ್ಲಿ ಉಂಟಾಗುವ ಒಡಕಿನಲ್ಲಿ ಇದನ್ನು ಗಮನಿಸಬಹುದು ತನ್ನ ಸಮುದಾಯದ ಅನುಭವಗಳು ದಾಖಲಾಗಿಲ್ಲ ಅದನ್ನು ಸ್ಥಾಪಿಸಬೇಕು ಎಂಬ ಧೋರಣೆಯು ಸಾಹಿತ್ಯದ ನಿರೂಪಣೆಗಳಲ್ಲಿ ಆಗಾಗ ಕೇಳಿಬರುತ್ತಲೇ ಇರುತ್ತದೆ ಪರೋಕ್ಷವಾಗಿ ಸಾಹಿತ್ಯದ ಅವಕಾಶ ಹಕ್ಕು ಚಲಾಯಿಸುವ ದಾರಿಗಳು ಕೂಡ ಇಂತಲ್ಲಿ ಸೃಷ್ಟಿಯಾಗುತ್ತವೆ.

ಜಾಗತೀಕರಣವು ಎಲ್ಲೆಡೆ ತೀವ್ರವಾಗಿ ಹರಡುತ್ತಿರುವುದರಿಂದ ಆಧುನೀಕರಣ ಜಾಗತೀಕರಣದ ಹಿನ್ನೆಲೆಯಲ್ಲಿ ಕನ್ನಡಕ್ಕೆ ಅದರ ಉಳಿವಿನ ಸವಾಲುಗಳು ಎದುರಾಗುತ್ತಿರುವುದು ಕನ್ನಡಿಗರೆಲ್ಲರಿಗೂ ವಿಷಾದನೀಯ ಸಂಗತಿಯಾಗಿದೆ. ಖಾಸಗೀಕರಣ, ಉದಾರೀಕರಣ, ಜಾಗತೀಕರಣಗಳಿಂದಾಗಿ ಕನ್ನಡ ನಾಡಿನ ಜನಜೀವನದಲ್ಲಿ ಹಾಗೂ ಆಡಳಿತ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದು ಇದರ ತೀವ್ರಪರಿಣಾಮಕ್ಕೆ ಕನ್ನಡ ಭಾಷೆಯು ಹೊರತಾಗಿಲ್ಲ. ಜಾಗತೀಕರಣದ ಹಿನ್ನೆಲೆಯಲ್ಲಿ ಅನೇಕ ವಿದ್ಯಮಾನಗಳು ಕನ್ನಡ ಭಾಷೆಯ ಉಳಿವಿಗೆ ಸವಾಲೊಡ್ಡುತ್ತಿವೆ. ಆಧುನಿಕ ಜಗತ್ತಿನ ಅಗತ್ಯಗಳಾದ ವಿಜ್ಞಾನ, ತಂತ್ರಜ್ಞಾನ, ವೈಚಾರಿಕತೆ, ಕಂಪ್ಯೂಟರ್ ಅಂತರ್ಜಾಲ, ವಿದೇಶಿ ಸಂಪರ್ಕ ಮೊದಲಾದ ಎಲ್ಲವನ್ನು ಸಾಧ್ಯಮಾಡಿದ ಭಾಷೆ ಆಂಗ್ಲಭಾಷೆ ಎಂಬ ನಿಲುವು ಕೆಲವರದಾಗಿದೆ. ಆಂಗ್ಲಭಾಷೆಗೆ ಅಭಿವೃದ್ಧಿ ಗುಣವಿದ್ದು ಇಂಗ್ಲೀಷ್ ಎಂದರೆ ಅಭಿವೃದ್ಧಿ, ಇದು ಒಂದು ಜಾಗತಿಕ ಭಾಷೆಯಾಗುತ್ತ ಪ್ರಬಲ ಆಡಳಿತ ಭಾಷೆಯಾಗಿ ವಿಸ್ತೃತಗೊಳ್ಳುತ್ತಿದೆ. ಜಾಗತೀಕರಣದ ಪ್ರಭಾವದಿಂದಾಗಿ ಇಂಗ್ಲೀಷ್ ಸಾಹಿತ್ಯಕ್ಕೆ ಶಾಶ್ವತೆ ಇರುತ್ತದೆ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಕನ್ನಡ ಹೆಸರಾಂತ ಬರಹಗಾರರು ತಮ್ಮ ತಮ್ಮ ಬರಹಗಳನ್ನು ಇಂಗ್ಲಿಷಿಗೆ ಅನುವಾದಿಸಲು ತವಕದಿಂದ ಕೂಡಿದ್ದು ಕೆಲವೊಮ್ಮೆ ಕನ್ನಡಕ್ಕೆ ಬದಲಾಗಿ ಇಂಗ್ಲಿಷಿನಲ್ಲೆ ಬರೆಯಲು ಇಚ್ಚಿಸುತ್ತಾರೆ. ಜಾಗತೀಕರಣದ ಪ್ರಭಾವದಿಂದ ಯಾವ ರಾಷ್ಟ್ರವೂ ಹೊರಗುಳಿಯಲಾರದು. ಆದ್ದರಿಂದ ಪ್ರತಿಯೊಂದು ದೇಶವು ದೇಶದ ಪ್ರಗತಿಗಾಗಿ ಜಾಗತೀಕರಣವನ್ನು ಸ್ವಾಗತಿಸುತ್ತಿದ್ದು ದೇಶಿಯತೆಯನ್ನು ಮರೆಯುತ್ತಿದೆ. ಇದಕ್ಕೆ ಕನ್ನಡ ನಾಡು ಹೊರತಾಗಿಲ್ಲ ಆಧುನೀಕರಣದಿಂದಾಗಿ ಜನಸಾಮಾನ್ಯರಲ್ಲಂತೂ ತಮ್ಮ ಮಾತೃಭಾಷೆಗಳ ಕೀಳರಿಮೆ ಹೆಳತೀರದು ಜನರು ತಮ್ಮ ಮಕ್ಕಳು ಕನ್ನಡವನ್ನು ಹೊರತುಪಡಿಸಿ ಇತರ ಭಾಷೆಗಳನ್ನು ಮಾತನಾಡುತ್ತಾರೆ ಎಂದರೆ ಅದನ್ನು ಗೌರವದ ವಿಷಯವೆಂದು ತಿಳಿಯುತ್ತಾರೆ. ಜನ ಸಾಮಾನ್ಯರಲ್ಲಿ ಅಥವಾ ಕನ್ನಡಿಗರಲ್ಲಿನ ಸ್ವಭಾಷಾ ತಾತ್ಸಾರ ಹಾಗು ಅನ್ಯಭಾಷಾ ವ್ಯಾಮೋಹ ತೀವ್ರವಾಗಿ ಹೆಚ್ಚಳಗೊಂಡರೆ ಕನ್ನಡದಂತಹ ಭಾಷೆಯ ಭವಿಷ್ಯವೇನು? ಜಾಗತಿಕವಾಗಿ ಲಾಭವೇ ಮುಖ್ಯ ಉದ್ದೇಶವಾಗಿರುವುದರಿಂದ ಶಿಕ್ಷಣ ಕ್ಷೇತ್ರದಲ್ಲಿ ಲಾಭದಾಯಕ ಹುದ್ದೆಯ ದೃಷ್ಟಿಯಿಂದ ಉನ್ನತ ಶಿಕ್ಷಣ ಕನ್ನಡ ಮಾಧ್ಯಮದಲ್ಲಿ ಕಷ್ಟಕರವಾದ್ದರಿಂದ ಶಿಕ್ಷಣ ಮಾಧ್ಯಮವಾಗಿ ಇತರ ಭಾಷೆಗಳ ಆಯ್ಕೆ ಹೆಚ್ಚುತ್ತಿದೆ. ಜಾಗತೀಕರಣದ ಹಿನ್ನೆಲೆಯಲ್ಲಿ ಮನುಷ್ಯ ಜೀವನ ಯಾಂತ್ರಿಕವಾಗಿ ಸಮಯದ ಅಭಾವದಿಂದ ಸಾಹಿತ್ಯಾಭಿರುಚಿ ಕಡಿಮೆಗೊಳ್ಳುತ್ತಿದೆ. ಆಧುನಿಕ ಯುಗದಲ್ಲಿ ಆಳುವ ಭಾಷೆ ಆಳಿಸಿಕೊಳ್ಳುವ ಭಾಷೆ ಎಂಬ

ವರ್ಗೀಕರಣವಿದ್ದು, ಆಳುವ ಭಾಷೆ ಶ್ರೇಷ್ಠವೆನಿಸಿದ್ದು ಆಯಾ ನಾಡಿನ ಭಾಷೆಯು ಆಳುವ ಭಾಷೆಯಾದರೆ ನಾಡಿನಲ್ಲಿನ ಇತರ ಭಾಷೆಗಳು ಆಳಿಸಿಕೊಳ್ಳುವ ಭಾಷೆಗಳಾಗುತ್ತವೆ. ಆದರೆ ಭಾರತದಲ್ಲಿ ಎಲ್ಲ ಭಾಷೆಗಳು ಆಳಿಸಿಕೊಂಡವು. ಆಂಗ್ಲಭಾಷೆ ಅಂತರಾಷ್ಟ್ರೀಯವಾಗಿ ಆಳುವ ಭಾಷೆಯಾಗಿದೆ.

ಈ ಮೇಲಿನ ವಿಚಾರಗಳನ್ನು ಗಮನಿಸಿದಾಗ ಕನ್ನಡನಾಡಿನಲ್ಲಿ ಕನ್ನಡ ಬೆಳೆಯುತ್ತಿದೆ ಎಂಬ ಸಾಂತ್ವಾನದ ಮಾತುಗಳನ್ನು ನಂಬಲಾಗದು ಜಾಗತೀಕರಣದ ಹಿನ್ನೆಲೆಯಲ್ಲಿ ಅನ್ಯಭಾಷೆಗಳ ಅಗತ್ಯತೆ ಹೆಚ್ಚಿದರೂ ಅವುಗಳ ಮುಂದೆ ತಾಯ್ನಾಡಿನ ಕನ್ನಡ ಭಾಷೆ, ಸಂಸ್ಕೃತಿಯ ಮೌಲ್ಯವನ್ನು ಕಡೆಗಣಿಸುವಂತಿಲ್ಲ.

**ಆಕರ ಗ್ರಂಥಗಳು :**


1. ಕನ್ನಡ ಕೈಪಿಡಿ ಸಂ–ಬಿ.ಎಂ. ಶ್ರೀಕಂಠಯ್ಯ ಮತ್ತು ಟಿ.ಎಸ್. ವೆಂಕಣ್ಣಯ್ಯ
2. ಕಣ್ಮರೆಯಾದ ಕನ್ನಡ – ಶಂ.ಬಾ ಜೋಷಿ
3. ಕನ್ನಡ ಭಾಷೆಯ ಚರಿತ್ರೆ – ಪ್ರ.ಗೋ. ಕುಲಕರ್ಣಿ
4. ಕನ್ನಡ ಭಾಷೆಯ ಕಲ್ಪಿತ ಚರಿತ್ರೆ – ಡಿಎನ್. ಶಂಕರಭಟ್ಟ
5. ಕವಿರಾಜ ಮಾರ್ಗ ಮತ್ತು ಕನ್ನಡ ಜಗತ್ತು – ಕೆ.ವಿ. ಸುಬ್ಬಣ್ಣ
6. ಕನ್ನಡ ಜಗ್ತು ಅರ್ಧಶತಮಾನ – ಕೆ.ವಿ. ನಾರಾಯಣ